**ಸಾಕ್ಷಿಯನ್ನು ದಿಃ 20.03.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಅರ್ಜಿದಾರರ ಪರ ವಕೀಲರಿಂದಃ-**

**ನಾನು ಈ ದಿನ ನನ್ನ ಮುಖ್ಯ ವಿಚಾರಣೆಯನ್ನು ನಾನೇ ಪ್ರಮಾಣೀಕರಿಸಿದ ನನ್ನ ಶಪಥ ಪತ್ರದ ಮೂಲಕ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ. ಅದರಲ್ಲಿರುವ ಎಲ್ಲಾ ಸಂಗತಿಗಳು ಸತ್ಯವಾಗಿವೆ ಹಾಗೂ ಅವುಗಳಲ್ಲಿರುವ ಸಹಿಗಳು ನನ್ನವೇ ಆಗಿವೆ. ಈ ಕೆಳಕಂಡ ದಾಖಲೆಗಳನ್ನು ಹಾಜರು ಪಡಿಸಲಾಗಿದ್ದು ಅವುಗಳನ್ನು ನಿಶಾನೆಯಾಗಿ ಗುರುತಿಸಲಾಯಿತು.**

ನಿಪಿ.20 ಒಳರೋಗಿ ದಾಖಲಾತಿಯನ್ನು

ನಿಪಿ.21 ಹೊರರೋಗಿ ದಾಖಲಾತಿಯನ್ನು

ನಿಪಿ.22 ನಾಲ್ಕು ಕ್ಷ ಕಿರಣಗಳ ಫೋಟೋಗಳನ್ನು ಒಟ್ಟಾಗಿ

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ**

ರೋಗಿ ನಮ್ಮ ಆಸ್ಪತ್ರೆಗೆ ಬರುವ ಮೊದಲು ಶ್ರೀರಂಗಪಟ್ಟಣ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡು ಬಂದಿದ್ದರು. ರೋಗಿಯೇ ಸ್ವತಃ ತನಗಾಗಿದ್ದ ಗಾಯಗಳ ಬಗ್ಗೆ ಮಾಹಿತಿ ನೀಡಿದರು. ರೊೞಗಿ ಆಸ್ಪತ್ರೆಗೆ ಬರುವಾಗ ಮಧ್ಯಪಾನ ಮಾಡಿಕೊಂಡು ಬಂದಿದ್ದರಾ ಎನ್ನುವ ಬಗ್ಗೆ ಪರೀಕ್ಷೆ ಮಾಡಿರುತ್ತೀರಾ ಎಂದರೆ ಸಾಕ್ಷಿ ಮಾಡಿಲ್ಲವೆಂದು ಹೇಳುತ್ತಾರೆ. ರೋಗಿ ಮಧ್ಯಪಾನ ಮಾಡಿಕೊಂಡು ಬಂದಿದ್ದರಿಂದ ನೀವು ಪರೀಕ್ಷೆ ಮಾಡಿಲ್ಲ ಎಂದರೆ ಸರಿಯಲ್ಲ. ಆಸ್ಪತ್ರೆಯಿಂದ ಬಿಡುಗಡೆಯಾದ ನಂತರ ಯಾವ ಔಷಧಿ ಮಾತ್ರೆಗಳನ್ನು ತೆಗೆದುಕೊಳ್ಳಬೇಕೆಂದು ಬಿಡುಗಡೆ ಸಾರಾಂಶದಲ್ಲಿ

*ಬರೆದುಕೊಟ್ಟಿರುತ್ತದೆ. ದಿಃ 23.01.2025 ರಂದು ರೋಗಿ ನಮ್ಮ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದಿದ್ದರು. ರೋಗಿಯ ದೇಹಕ್ಕೆ ಅಳವಡಿಸಿದ್ದ ಸಲಕರಣೆಗಳು ರೋಗಿಯ ದೇಹಕ್ಕೆ ಹೊಂದಿಕೊಂಡಿರುವುದರಿಂದ ಪುನಃ ರೋಗಿಗೆ ಶಸ್ತ್ರ ಮಾಡುವ ಅಗತ್ಯತೆ ಇಲ್ಲ ಎಂದರೆ ಸರಿಯಲ್ಲ.*

*ರೋಗಿಗೆ ಶೇ 40 ದೈಹಿಕ ನ್ಯೂನ್ಯತೆಯನ್ನು ಆಸ್ಪತ್ರೆಯಲ್ಲಿ ನೆಡಸಿದ ವೈಜ್ಞಾನಿಕ ಪರೀಕ್ಷೆ ಮತ್ತು ಕೇಂದ್ರ ಸರ್ಕಾರದ ಸುತ್ತೋಲೆ ಪ್ರಕಾರ ನಿರ್ಧರಿಸಿ ನೀಡಿರುತ್ತೇನೆ. ಕೇಂದ್ರ ಸರ್ಕಾರದ ಸುತ್ತೋಲೆ ಒಪ್ರಕಾರ ನೀವು ದೈಹಿಕ ನ್ಯೂನ್ಯತೆ ನಿರ್ಧರಿಸಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಸಹಾಯ ಮಾಡಲೆಂದು ಹೆಚ್ಚಿನ ದೈಹಿಕ ನ್ಯೂನ್ಯತೆಯನ್ನು ನಿರ್ಧರಿಸಿ ಸುಳ್ಳು ಸಾಕ್ಷಿ ಕೊಡುತ್ತಿದ್ದೀರಾ ಎಂದರೆ ಸರಿಯಲ್ಲ.*

***ಮರು ವಿಚಾರಣೆ ಇಲ್ಲ.***

***(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ).***

***ಸಾ.ಓ.ಹೇ.ಕೆ.ಸ.ಇ.***

***ಪ್ರಧಾನ ಹಿರಿಯ ಸಿವಿಲ್ ಜಡ್ಜ್***
***ಮತ್ತು ಜೆ.ಎಂ.ಎಫ್.ಸಿ., ಪಾಂಡವಪುರ.***